# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸನಗರ

## ಸಿ.ಸಿ. ನಂ. 400/2019

**ಚಾಸಾ–5 ಪ್ರಾಸಾ–4**

| | | |
|---|---|---|
| ಹೆಸರು | – | ಸುಲೋಚನಾ |
| ಗಂಡನ ಹೆಸರು | – | ರಾಘವೇಂದ್ರ |
| ವಯಸ್ಸು | – | 36 ವರ್ಷ |
| ವೃತ್ತಿ | – | ಕೂಲಿ |
| ವಾಸಸ್ಥಳ | – | ತೀರ್ಥಹಳ್ಳಿ |

(ದಿನಾಂಕಃ 13.11.2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ಚಾಸ 1 ರವರು ನನ್ನ ಅಕ್ಕನ ಮಗಳು. ಚಾಸ 4 ರವರು ನನ್ನ ಸಹೋದರಿ. ಚಾಸ 1 ರವರನ್ನು ಆರೋಪಿ 1 ರವರ ಜೊತೆ ವಿವಾಹ ಮಾಡಿಕೊಟ್ಟಿರುತ್ತೇವೆ. ಆರೋಪಿ 1 ರಿಂದ 4 ರವರು ಚಾಸ 1 ರವರಿಗೆ ಮನೆಯಲ್ಲಿ ಕಿರುಕುಳ ಕೊಟ್ಟು ಅವಾಚ್ಯ ಶಬ್ದಗಳಿಂದ ರಂಡೆ ಮುಂಡೆ ಹಾದರಗಿತ್ತಿ ಎಂದು ಅವಾಚ್ಯವಾಗಿ ಬೈದು ವರದಕ್ಷಿಣೆ ಕಿರುಕುಳ ಕೊಡುತ್ತಿದ್ದರು.

2. ದಿನನಿತ್ಯ ಆರೋಪಿ 1 ರವರು ತನ್ನ ಹೆಂಡತಿಯಾದ ಚಾಸ 1 ರವರಿಗೆ ಕತ್ತು ಹಿಚುಕಿ ಕೊಲ್ಲುತೇನೆ ಎಂದು ಹೆದರಿಸುತ್ತಿದ್ದರು. ಪ್ರತಿ ದಿನ ಗಲಾಟೇ ಆಗಿರುವುದರಿಂದ ಚಾಸ 1 ರವರು ಅದನ್ನು ಸಹಿಸಲು ಆಗದೇ ಇರುವುದರಿಂದ ಅವರ ತವರು ಮನೆಗೆ ಬಂದಿರುತ್ತಾರೆ.

3. ಆರೋಪಿ 1 ರವರು ಎರಡನೇ ವಿವಾಹ ಆಗಿರುವುದರಿಂದ ನಗರದ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಅಲ್ಲಿಂದ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ಮಾರಿಗುಡ್ಡದಲ್ಲಿರುವ ಮಾರಿಕಾಂಬ ದೇವಾಲಯದ ಮುಂದೆ ಚಾಸ 1 ರವರಿಗೆ ಆರೋಪಿಗಳು ಹೊಡೆಯಲು ಬಂದಿರುತ್ತಾರೆ.

4. ಆಗ ಆರೋಪಿಗಳು ಆರೋಪಿ 5 ರವರನ್ನು ವಿವಾಹ ಮಾಡಿಕೊಂಡು ಬರುತ್ತೇನೆ ಏನು ಮಾಡಿಕೊಳ್ಳುತ್ತಿಯಾ ಎಂದು ಆರೋಪಿಗಳು ಚಾಸ 1 ರವರಿಗೆ ಹೊಡೆದಿರುತ್ತಾರೆ. ಸದರಿ ವಿಚಾರವಾಗಿ ಚಾಸ 1 ರವರು ದೂರನ್ನು ದಾಖಲಿಸಿರುತ್ತಾರೆ. ಸದರಿ ವಿಚಾರವಾಗಿ ಪೊಲಿಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

5. ಆ ದಿನ ಚಾಸ 1 ರವರಿಗೆ ಹಲ್ಲೆ ಮಾಡಿದ ಆರೋಪಿ 1 ರಿಂದ 5 ರವರು ಈಗ ನ್ಯಾಯಾಲಯದ ಮುಂದೆ ಇರುತ್ತಾರೆ ಸಾಕ್ಷಿಯು ಅವರನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು).

**<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ</u>**

1. ಆರೋಪಿ 1 ರಿಂದ 4 ರವರು ಚಾಸ 1 ರವರಿಗೆ ನೀಡುತ್ತಿದ್ದ ವರದಕ್ಷಿಣೆ ಕಿರುಕುಳವನ್ನು ತಾಳಲಾರದೇ ಹಾಗೂ ತನಗೆ ಒಂದು ಚಿಕ್ಕ ಮಗು ಇರುವುದರಿಂದ ತನ್ನ ತವರು ಮನೆಗೆ ಬಂದಿರುತಾರೆ ಎಂದರೆ ಸರಿ. ಪ್ರತಿ ದಿನ ಚಾಸ 1 ರವರಿಗೆ ಆರೋಪಿ 1 ರಿಂದ 4 ರವರು ಮದುವೆ ಕಾಲಕ್ಕೆ ವರದಕ್ಷಿಣೆ ತಂದಿರುವುದಿಲ್ಲ ವರದಿಕ್ಷಿಣೆ ಹಣ ತೆಗೆದುಕೊಂಡು ಬರುವಂತೆ ಕಿರುಕುಳ ನೀಡುತ್ತಿದ್ದರು ಎಂದರೆ ಸರಿ.

2. ಚಾಸ 1 ರವರು ಸದರಿ ಆದ ವಿಚಾರವನ್ನು ನನಗೆ ಮತ್ತು ನಮ್ಮ ಅಕ್ಕನಿಗೆ ಫೊನ್ ಮೂಲಕ ಮತ್ತು ತಾನು ಬಂದಾಗ ತಿಳಿಸುತ್ತಿದ್ದರು ಎಂದರೆ ಸರಿ. ನಾವು ಚಾಸ 1 ರವರಿಗೆ ಸದರಿ ವಿಷಯವನ್ನು ಬಿಟ್ಟು ಆರೋಪಿ 1 ರಿಂದ 4 ರವರ ಜೊತೆ ಸಹಕರಿಸಿಕೊಂಡು ಹೊಗುವಂತೆ ಉಪದೇಶ ಮಾಡಿರುತ್ತೇವೆ ಎಂದರೆ ಸರಿ.

3. ಚಾಸ 1 ರವರು ತನ್ನ ತವರು ಮನೆಗೆ ಬಂದಾಗ ದಿನಾಂಕಃ 17.05.2017 ರಂದು ಆರೋಪಿ 1 ರವರು ಆರೋಪಿ 5 ರವರನ್ನು ಅಪಹರಿಸಿಕೊಂಡು ಹೋಗಿರುತ್ತಾರೆ ಎಂದು ನಗರ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ ಎಂದರೆ ಸರಿ. ಆರೋಪಿ 5 ರವರ ತಂದೆ ತನ್ನ

ಮಗಳಾದ ಆರೋಪಿ 5 ರವರನ್ನು ಆರೋಪಿ 1 ರವರು ಅಪಹರಣ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸರಿ.

4. ಸದರಿ ವಿಚಾರ ನಮಗೆ ಗೊತ್ತಾದ ನಂತರ ನಾನು ಚಾಸ 1 ಮತ್ತು ಅವರ ತಾಯಿಯಾದ ಚಾಸ 4 ರವರು ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದರೆ ಸರಿ. ಮಾರಿಗುಡ್ಡದ ಮಾರಿಕಾಂಬ ದೇವಾಲಯದ ಎದುರುಗಡೆ ಇರುವ ಮೈದಾನದಲ್ಲಿ ಆರೋಪಿ 1 ರಿಂದ 4 ರವರನ್ನು ಸದರಿ ವಿಚಾರವನ್ನು ಚಾಸ 1 ರವರು ಪ್ರಶ್ನಿಸಿದಾಗ ಆರೋಪಿ 1 ರಿಂದ 5 ರವರು ಚಾಸ 1 ರವರಿಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ.

5. ಆರೋಪಿ 1, 2, 3 ಮತ್ತು 4 ರವರು ಅರೋಪಿ 5 ರವರನ್ನೇ ಸೊಸೆಯಾಗಿ ಮಾಡಿಕೊಳ್ಳುತೇವೆ ನೀನು ವರದಕ್ಷಿಣೆ ತಂದಿರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿ. ಆ ಸಂದರ್ಭದಲ್ಲಿ ಆರೋಪಿ 1 ರವರು ಚಾಸ 1 ರವರು ಕುತ್ತಿಗೆ ಹಿಚುಕಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿ. ಇನ್ನೊಂದು ಸಾರಿ ನಮ್ಮ ವಿಚಾರಕ್ಕೆ ಬಂದರೆ ಚಾಸ 1 ರವರನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

6. ನಾನು ಮತ್ತು ಚಾಸ 4 ರವರು ಚಾಸ 1 ರವರಿಗೆ ಆರೋಪಿಗಳು ಹೊಡೆಯುವುದನ್ನು ಬಿಡಿಸಿರುತ್ತೇವೆ ಎಂದರೆ ಸರಿ. ಸದರಿ ಘಟನೆ ಹಿನ್ನಲೆಯಿಂದ ಪೊಲಿಸಲು ನನ್ನನ್ನು ವಿಚಾರಣೆ ಮಾಡಿ ದಿನಾಂಕಃ 25.05.2017 ರಂದು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದಿರುತ್ತಾರೆ ಎಂದರೆ ಸರಿ. ನಾನು ಹೇಳಿದ ಹೇಳಿಕೆಯನ್ನು ಪೊಲಿಸರು ಟೈಪ್ ಮಾಡುತ್ತಾ ನನಗೆ ಓದಿ ಹೇಳಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಸಿ.ಹೆಚ್ ರವರಿಂದಃ</u>**

1. ನನಗೆ ಚಾಸ 1 ರವರು ತನ್ನ ಗಂಡನ ಮನೆಯಲ್ಲಿ ಆಗುತ್ತಿರುವ ಹಿಂಸೆಯನ್ನು ಫೋನ್ ಮೂಲಕ ತಿಳಿಸಿದ ನಂತರ ನಾನು ಆಗಲೀ ಅಥವಾ ಚಾಸ 1 ರವರು ಆಗಲೀ ಮಹಿಳಾ ಸಾಂತ್ವಾನ ಕೇಂದ್ರಕ್ಕೆ ದೂರನ್ನು ಕೊಡಲು ಪ್ರಯತ್ನಿಸಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರಯತ್ನಿಸಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ.

2. ಸಾಂತ್ವಾನ ಕೇಂದ್ರ ದವರು ನನಗೆ ಮತ್ತು ಆರೋಪಿಗಳಿಗೆ ಬರುವಂತೆ ತಿಳಿಸಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ನೋಟಿಸ್ ಕೊಟ್ಟಿರುತ್ತಾರೆ ಆದರೆ ಆರೋಪಿಗಳು ಬಂದಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

3. ನಾನು ಸದರಿ ವಿಚಾರವನ್ನು ಪೊಲಿಸರ ಹೇಳಿಕೆಯಲ್ಲಿ ಹೇಳಿ ಬರೆಸಿರುತ್ತೇನೆ. ನನಗೆ ಆರೋಪಿ 1 ರವರು ಚಾಸ 1 ರವರಿಗೆ ಕುತ್ತಿಗೆ ಹಿಚುಕಿ ಕೊಲ್ಲುತ್ತೇನೆ ಎಂದು ಹೇಳಿದ ದಿನಾಂಕ ಹೇಳಲು ಬರುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಮಾರಿಗುಡೆ ದೇದಾಲಯದ ಮುಂದೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

4. ಚಾಸ 1 ರವರಿಗೆ ತಮ್ಮ ಗಂಡನ ಮನೆಯಲ್ಲಿ ಚಾಸ 1 ರವರನ್ನು ಕುತ್ತಿಗೆ ಹಿಚುಕಿ ಕೊಲ್ಲುತೇವೆ ಎಂದು ನನಗೆ ತಿಳಿಸಿದ ನಂತರ ದೂರನ್ನು ದಾಖಲಿಸಿರುವುದಿಲ್ಲ ಸಾಕ್ಷಿಯು ಮುಂದುವರಿದು ಅವರು ಸರಿಹೊಗಬಹದು ಎಂದು ದೂರನ್ನು ದಾಖಲಿಸಿರುವುದಿಲ್ಲ ಎಂದು ನುಡಿಯುತ್ತಾರೆ.

5. ಚಾಸ 1 ರವರು ವಿವಾಹ ಆದ ನಂತರ 1 ತಿಂಗಳು ಮಾತ್ರ ಆರೋಪಿಗಳ ಮನೆಯಲ್ಲಿ ಇದ್ದು ಅದಾದ ನಂತರ ಚಾಸ 1 ರವರು ತನಗೆ ಬೇರೆ ಮನೆ ಮಾಡಿಕೊಡಿ ಎಂದು ಹೇಳಿ ಮನೆಯಿಂದ ಹೊರಗೆ ಇರುತ್ತಾರೆ ಎಂದರೆ ಸರಿಯಲ್ಲ. ಚಾಸ 1 ರವರು ಆರೋಪಿಗಳಿಗೆ ತನಗೆ ಬೇರೆ ಮನೆ ಮಾಡಿಕೊಡಿ ಎಂದು ಕೇಳಿದಾಗ ಆರೋಪಿಗಳು ನಾವು ಒಟ್ಟು ಕುಟುಬಂದ ದಲ್ಲಿ ಇದ್ದು ಈಗ ಮನೆ ಕಟ್ಟಲು ಆಗುವುದಿಲ್ಲ ಎಂದು ಹೇಳಿದ್ದರಿಂದ ಚಾಸ 1 ರವರು ಹೇಳದೇ ಕೇಳದೇ ಮನೆಯನ್ನು ಬಿಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಚಾಸ 1 ರವರು ಬಾಣಂತಿಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

6. ಚಾಸ 1 ರವರು ಗರ್ಬಿಣಿ ಇದ್ದಾಗ ಬಂದಿರುತ್ತಾರೆ ವಿನಃ ಬಾಣಂತಿ ಆದ ನಂತರ ಬಂದಿರುವುದಿಲ್ಲ ಎಂದು ಸೂಚಿಸಿದರೆ ಸರಿ. ಅರೋಪಿ 1 ರವರು ತಮ್ಮ ವಕೀಲರ ಮೂಲಕ ಚಾಸ 1 ರವರಿಗೆ ಜೀವನ ನಡೆಸಬೇಕು ಎಂದು ನೋಟಿಸ್ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

7. ನಮ್ಮ ಊರಿನಿಂದ ಘಟನೆ ನಡೆಯಿತು ಎಂಬ ಮಾರಿಗುಡ್ಡದ ಸ್ಥಳವು ಸುಮಾರು 90 ಕಿ.ಮೀ ಅಂತರ ದಲ್ಲಿ ಇರುತ್ತದೆ. ದಿನಾಂಕಃ 17.05.2017 ರಂದು ಆರೋಪಿ 1 ಆರೋಪಿ 5 ರವರನ್ನು ಅಪಹರಣ ಮಾಡಿರುವ ವಿಚಾರಕ್ಕಾಗಿ ಆರೋಪಿ 1 ರವರನ್ನು ನಗರ ಪೊಲಿಸ್

ರವರ ಮೂಲಕ ಈ ನ್ಯಾಯಾಲಯದ ನ್ಯಾಯಾಧೀಶ ಮುಂದೆ ಹಾಜರುಪಡಿಸಿರುತ್ತಾರೆ ಎಂದರೆ ಸರಿ.

8. ಆರೋಪಿ 1 ರವರನ್ನು ಈ ನ್ಯಾಯಾಲಯದ ನ್ಯಾಯಾಧೀಶ ಮುಂದೆ ಹಾಜರುಪಡಿಸಿದಾಗ ನ್ಯಾಯಾಧೀಶರು ನ್ಯಾಯಾಲಯದ ಬಂಧನಕ್ಕೆ ತೆಗೆದುಕೊಳ್ಳದೇ ಬಿಟ್ಟು ಕಳುಹಿಸಿರುತ್ತಾರೆ ಎಂದರೆ ಸರಿ.

9. ಚಾಸ 1 ರವರು ಆರೋಪಿ 1 ರವರಿಗೆ ಸಂಮಂಜಸವಾದ ಕಾರಣ ಇಲ್ಲದೇ ಅವರನ್ನು ಬಿಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ಚಾಸ 1 ರವರಿಗೆ ವರದಕ್ಷಿಣೆಗೆ ಕೇಳಿರುದಿಲ್ಲ ಮತ್ತು ಚಾಸ 1 ರವರಿಗೆ ಬೈದಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.